ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆ ಪಡೆದಿದ್ದಾರಲ್ಲಾ, ಅದು ಹೇಳಿ. ಹಣಿಬರಹ. ಏನು ಅರ್ಥ ಇದೆಯಾ ಈ ರೀತಿ ಉತ್ತರ ಕೊಟ್ಟರೆ...

ಉಪಾಧ್ಯಕ್ಷರು :– ಈಗ ಗಮನ ಸೆಳೆಯುವ ಸೂಚನೆಗಳು, ಅದಕ್ಕಿಂತ ಮುಂಚಿತವಾಗಿ.. ರವಿಯವರೆ, ಕುಳಿತುಕೊಳ್ಳಿ.

ಶ್ರೀ ಸಿ. ಟಿ. ರವಿ :– ಮಾನ್ಯ ಉಪಾಧ್ಯಕ್ಷರೆ, ಭೂಮಾಪಕರು ಕಳೆದ ಐದು ದಿನದಿಂದ ಧರಣಿ ಕುಳಿತಿದ್ದಾರೆ, ಅವರು ನಿಮ್ಮ ಹತ್ತಿರ ಎಲ್ಲಾ ಬಂದು ಕೇಳಿಕೊಂಡಿದ್ದಾರೆ.

ಉಪಾಧ್ಯಕ್ಷರು :– ರವಿ, ಆಮೇಲೆ ಮಾತನಾಡಿ. ವಾಟಾಳ್ ರವರೆ, ತಾವು ಎರಡು ನಿಮಿಷದಲ್ಲಿ ಮುಗಿಸುತ್ತೀರಾ?

(ಆ) ವಿಷಯ:– ಕಾವೇರಿ ನೀರು ಬಿಡಲು ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಜಯಲಲಿತಾ ಅವರ ನಾಯಕತ್ವದಲ್ಲಿನ ಕೇಂದ್ರದ ಮೇಲೆ ಒತ್ತಡ ತರುತ್ತಿರುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :– ಮುಗಿಸುತ್ತೇನೆ. ಕಾವೇರಿ ನೀರಿನ ಬಗ್ಗೆ ಹೇಳುವುದಾದರೆ, ನಮಗೆ ಕೃಷ್ಣರಾಜ ಸಾಗರದಲ್ಲಿ ನಮಗೆಲ್ಲ ನೀರಿಲ್ಲ. ನಾವು ನಿಜವಾಗಲೂ ಬಹಳ ತೊಂದರೆಯಲ್ಲಿದ್ದೇವೆ. ಕರ್ನಾಟಕದ ರೈತರು ಅತ್ಯಂತ ಘೋರ ಪರಿಸ್ಥಿತಿಯಲ್ಲಿದ್ದಾರೆ. ದುಸ್ಥಿತಿಯಲ್ಲಿದ್ದಾರೆ, ಗಂಬೀರವಾದ ಪರಿಸ್ಥಿತಿ ಇದೆ, ನಮಗೆ ನೀರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನೀರನ್ನು ಬಿಡಲೇಬೇಕೆಂದು ಹೇಳಿ, ಕೇಂದ್ರದ ಮೇಲೆ ಒತ್ತಡ ಹೇರುವುದಕ್ಕೆ ಭಾರೀ ಪ್ರಮಾಣದಲ್ಲಿ ನಾಳೆ ಇಡೀ ತಮಿಳುನಾಡಿನಾದ್ಯಂತ ಎಐಎಡಿಎಂಕೆ ಯವರು ಅಲ್ಲಿನ ಮುಖ್ಯಮಂತ್ರಿ ಜಯಲಲಿತಾ ನಾಯಕತ್ವದಲ್ಲಿ ಇಡೀ ರಾಜ್ಯಾದ್ಯಂತ ಕೇಂದ್ರ ಸರ್ಕಾರದ ಕಾರ್ಯಾಲಯದ ಮುಂದೆ ಚಳುವಳಿ ಮಾಡುತ್ತಿದ್ದಾರೆ, ಹೋರಾಟ ಮಾಡುತ್ತಿದ್ದಾರೆ. ಕೇಂದ್ರದ ಮೇಲೆ ಒತ್ತಡ ತರುತ್ತಿದ್ದಾರೆ. ಈ ಒತ್ತಡ ಅಲ್ಲದೆ, ಅಲ್ಲಿ ಪ್ರಾಧಿಕಾರದ ಸಭೆ ಕರೆಯಬೇಕೆಂದು ಹೇಳುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಕರ್ನಾಟಕದಲ್ಲೂ ಅವರು ಗಂಭೀರವಾಗಿ ಇರಬೇಕೇ ಹೊರತು, ಉದ್ದೇಶಪೂರ್ವಕವಾಗಿ, ಶಾಂತವಾಗಿರತಕ್ಕಂಥ ಕರ್ನಾಟಕದಲ್ಲಿ ಅಶಾಂತ ವಾತಾವರಣವನ್ನು ತರುವುದಕ್ಕೆ ಜಯಲಲಿತ ರವರೇ ಕಾರಣಕರ್ತರಾಗುತ್ತಿದ್ದಾರೆ. ನಾನು ಅವರಿಗೆ ಹೇಳುತ್ತಿದ್ದೇನೆ, ಇದು ಒಳ್ಳೆಯ ಸೂಚನೆ ಅಲ್ಲ, ನೀವು ಉದ್ದೇಶಪೂರ್ವಕವಾಗಿ ರಾಜಕೀಯ ಮಾಡುತ್ತಿದ್ದೀರಿ. ನಿಮ್ಮ ರಾಜಕೀಯ–ಕ್ಕೋಸ್ಕರಕ್ಕಾಗಿ ಕಾವೇರಿ ವಿಚಾರವನ್ನು ತಮಿಳುನಾಡಿನಾದ್ಯಂತ ನಾಳೆ ಚಳುವಳಿಗೆ ಹೊರಟಿರತಕ್ಕಂಥಾದ್ದು, ಸರಿಯಾದ ನೀತಿ ಅಲ್ಲ. ಚಳುವಳಿ ಮಾಡಿ ಮಾನ್ಯ ಪ್ರಧಾನ ಮಂತ್ರಿಯವರಿಗೆ ಒತ್ತಡ ತರುತ್ತಿದ್ದಾರೆ. ರಾಷ್ಟ್ರಪತಿ ಅವರ ಮೇಲೆ ಒತ್ತಡ ತರುತ್ತಿದ್ದಾರೆ. ಕರ್ನಾಟಕದಲ್ಲಿ ನೀರು ಇಲ್ಲದೆ ಇದ್ದರೂ ನೀರು ಕೊಡಿ ಎಂದು ಒತ್ತಡ ತರುತ್ತಿದ್ದಾರೆ. ಈಗಾಗಲೇ ಕಬಿನಿ ಜಲಾಶಯದಿಂದ ಯದ್ವಾತದ್ವಾ ನೀರು ಹೋಗುತ್ತಿದೆ. ಅದರ ಬಗ್ಗೆ ಅವರು ಮಾತನಾಡುತ್ತಿಲ್ಲ. ಅದು ಕೃಷ್ಣರಾಜ ಸಾಗರದಿಂದ ನೀರು ಕೊಡಬೇಕೆಂದು ಇರುವುದು. ನಾವು ಒಂದು ಹನಿ ನೀರನ್ನೂ ಕೊಡುವಂತಹ ಪರಿಸ್ಥಿತಿ ಈಗ ಇಲ್ಲ. ಆದುದರಿಂದ ಅವರೇನು ನಾಳೆ ಚಳುವಳಿ ಮಾಡುತ್ತಿದ್ದಾರೆ, ಅದನ್ನು ಕೈಬಿಡಬೇಕು. ಆ ಚಳುವಳಿಯನ್ನು ಕೈಬಿಡಲಿಲ್ಲವೆಂದರೆ, ನಾವು ಕರ್ನಾಟಕಾದ್ಯಂತ ಹೋರಾಟ ಮಾಡಬೇಕಾಗುತ್ತದೆ. ಕರ್ನಾಟಕ ಬಂದ್ ಮಾಡಬೇಕಾಗುತ್ತದೆ. ತಮಿಳುನಾಡು ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ. ಸರ್ಕಾರ ಈ ಬಗ್ಗೆ ಬಹಳ ಮೌನವಾಗಿದ್ದೀರಿ, ಇದರ ಬಗ್ಗೆ ಏನಾದರೂ ಹೇಳಿಕೆ ಕೊಡುವುದಿದ್ದರೆ ಕೊಡಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕೈಗಾರಿಕೆ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ನಾವು ಸಹ ಪತ್ರಿಕೆಗಳ ಮೂಲಕ ಈ ವಿಚಾರವನ್ನು ತಿಳಿದುಕೊಂಡಿದ್ದೇವೆ. ಮಾನ್ಯ ಗೌರವಾನ್ವಿತ ಸದಸ್ಯರು ಎತ್ತಿರತಕ್ಕಂಥ ವಿಚಾರ ಬಹಳ ಗಂಭೀರವಾದಂತಹ ವಿಚಾರವೆನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಕೆಆರ್‌ಎಸ್ ಹಾಗೂ ಕಬಿನಿಯಲ್ಲಿ ಯದ್ವಾತದ್ವಾ ನೀರು ಹೋಗುತ್ತಿದೆ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಎಷ್ಟು ನೀರು ಸಂಗ್ರಹವಾಗಿದೆ? ಎಷ್ಟು ನೀರು ಹೊರಗಡೆ ಹೋಗುತ್ತಿದೆ ಎನ್ನುವ ಅಂಕಿ ಅಂಶವನ್ನು ಸರ್ಕಾರದ ಮೂಲಕ ಅಧಿಕೃತವಾಗಿ ನಾನು ತಮಗೆ ಕೊಡಿಸುತ್ತೇನೆ. ಆದರೆ ಕರ್ನಾಟಕದ ರಾಜ್ಯದ ರೈತರ ಹಿತಾಸಕ್ತಿಯನ್ನು ಬಿಟ್ಟು, ರಾಜ್ಯದ ಹಿತಾಸಕ್ತಿಯನ್ನು ಬಿಟ್ಟು, ಬೇರೆ ಯಾವುದೇ ಒತ್ತಡಗಳಿಗೆ ಕೂಡ ಕರ್ನಾಟಕ ಸರ್ಕಾರ ಮಣಿಯುವುದಿಲ್ಲ. ಅದರ ಬಗ್ಗೆ ಸಂಶಯ ಈ ಸದನದ ಗೌರವಾನ್ವಿತ ಯಾವುದೇ ಸದಸ್ಯರಿಗೂ ಸಹ ಯಾವುದೇ ಪಕ್ಷದವರಾಗಲಿ, ನಾವೆಲ್ಲರೂ ಸಹ ಈ ನೀರಿನ ವಿಚಾರದಲ್ಲಿ ಒಗ್ಗಟ್ಟಿನಿಂದ ಇದುವರೆಗೂ ಸಹ ಹೋಗಿದ್ದೇವೆ. ಮುಂದೆಯೂ ಸಹ ಹೋಗುತ್ತೇವೆ. ನೀರು ಬಿಡತಕ್ಕಂಥ ಪ್ರಶ್ನೆ ಇಲ್ಲ. ಮತ್ತು ನಮ್ಮ ಜಲಾಶಯಗಳಲ್ಲಿ ಅದರಲ್ಲೂ ವಿಶೇಷವಾಗಿ ಕಾವೇರಿ ಮತ್ತು ಈ ಕಡೆ ಇರತಕ್ಕಂಥ ಜಲಾಶಯಗಳಲ್ಲಿ ಇನ್ನೂ ನೀರು ಬಹಳ ಬರಬೇಕಾಗಿರುವುದರಿಂದ ಈ ಹಂತದಲ್ಲಿ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಈಗಾಗಲೇ ಮಾನ್ಯ ಜಲಸಂಪನ್ಮೂಲ ಸಚಿವರು ನೀರು ಬಿಡುವಂತಹ ಪ್ರಶ್ನೆ ಬರುವುದಿಲ್ಲವೆಂದು ಹೇಳಿದ್ದಾರೆ. ನಮಗೆ ಇದುವರೆಗೂ ಕೂಡ ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ ಯಾವುದೇ ರೀತಿಯ ಸಂಪರ್ಕವನ್ನು ಮಾಡಿಲ್ಲ. ಯಾವುದೇ ರೀತಿಯ ಸೂಚನೆಯನ್ನೂ ಸಹ ಕೊಟ್ಟಿಲ್ಲ. ಮತ್ತು ತಮಿಳುನಾಡಿನವರು ಏನು ಮಾತನಾಡುತ್ತಾರೆ? ಏನು ಮಾಡಿದ್ದಾರೆ ಎನ್ನುವುದರ ಬಗ್ಗೆ ಸರ್ಕಾರದ ಮುಂದೆ ಯಾವುದೇ ರೀತಿಯ ಮಾಹಿತಿ ಇಲ್ಲ. ಎಷ್ಟು ನೀರು ಹೋಗುತ್ತಿದೆ ಎನ್ನುವುದರ ಬಗ್ಗೆ ನಾನು ಅಂಕಿ ಅಂಶಗಳನ್ನು ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷರೆ, ತಮಿಳುನಾಡು ಸರ್ಕಾರ ನೇರವಾಗಿ ನಾಳೆ ಅವರು ಚಳುವಳಿಗೆ ಇಳಿದಿದ್ದಾರೆ. ನಾನು ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಚಳುವಳಿಗೆ ಇಳಿಯತಕ್ಕಂಥ ಜಯಲಲಿತಾ ಅವರು ಉದ್ದೇಶಪೂರ್ವಕವಾಗಿ ನಮ್ಮ ರಾಜ್ಯದ ಮೇಲೆ ಒಂದು ರೀತಿಯಲ್ಲಿ ದ್ವೇಷ ಕಾರುತ್ತಿದ್ದಾರೆ, ಇದು ಒಳ್ಳೆಯದಲ್ಲ. ನಾನು ಅವರ ಬಗ್ಗೆ ಬಹಳ ಗೌರವ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಬೇಕಾಗಿರಲಿಲ್ಲ. ಕೃಷ್ಣರಾಜ ಸಾಗರದಲ್ಲಿ ಪ್ರಾಮಾಣಿಕವಾಗಿ ನೀರಿಲ್ಲ. ತಮಿಳುನಾಡು ರೈತರೇ ಬಂದು ನೋಡಿದ್ದಾರೆ. ಕೃಷ್ಣರಾಜ ಸಾಗರದಲ್ಲಿ ಅವರು ಒಂದು ಕುಟುಂಬ ಎಂದು ಒಂದು ವ್ಯವಸ್ಥೆ ಮಾಡಿಕೊಂಡು ಕರ್ನಾಟಕದ ರೈತರು, ತಮಿಳುನಾಡು ರೈತರು ಒಟ್ಟಿಗೆ ಬಂದು ಇಲ್ಲಿ ನೀರಿನ ಪರಿಶೀಲನೆ ಮಾಡಿದ್ದಾರೆ. ನೀರಿಲ್ಲ ಎನ್ನುವಂತಹ ಸಂದರ್ಭ ಇದ್ದರೂ ಕೂಡ ಜಯಲಲಿತಾ ಅವರು ತಮ್ಮ ರಾಜಕೀಯಕ್ಕೋಸ್ಕರಕ್ಕಾಗಿ, ಏನು ಚಳುವಳಿ ಮಾಡುವುದಕ್ಕೆ ಹೊರಟಿದ್ದಾರೆ, ಆ ಚಳುವಳಿ ವಿರುದ್ಧ ಈ ಸದನದಲ್ಲಿ ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಸರಿಯಲ್ಲ, ಸರಿಯಾದ ರೀತಿಯಲ್ಲ, ಜಯಲಲಿತಾ ಅವರ ವರ್ತನೆ ತೀವ್ರ ಖಂಡನೀಯ –ವಾದುದು. ತಮಿಳುನಾಡು ಮುಖ್ಯಮಂತ್ರಿಗಳ ವರ್ತನೆ. ಸರಿಯಾದ ವರ್ತನೆಯಲ್ಲ. ತಮಿಳುನಾಡು ಮುಖ್ಯಮಂತ್ರಿಗಳ ರಾಜಕೀಯ ವರ್ತನೆಯನ್ನು ತೀವ್ರವಾಗಿ ವಿರೋಧ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಆಸನವನ್ನು ಬಿಟ್ಟು ಸಭಾತ್ಯಾಗ ಮಾಡಿದರು)